ಆಗಸ್ಟ್ 17, 2014

ಮಾನ್ಯ ಸಂಪಾದಕರೇ,

ಲೋಕಸೇವಾ ಆಯೋಗದ ನೇಮಕಾತಿ ಕುರಿತಂತೆ ನನ್ನ ಮನದಾಳದ ಮಾತನ್ನು ತಮಗೆ ಕಳುಹಿಸುತ್ತಿದ್ದೇನೆ. ದಯಮಾಡಿ ಇದನ್ನು ಪ್ರಕಟಿಸುವ ಮೂಲಕ ನನ್ನ ನಿಲುವನ್ನು ತಮ್ಮ ಓದುಗರಿಗೆ ಲೇಖನ ರೂಪದಲ್ಲಿ ಮನನ ಮಾಡಬೇಕೆಂದು ಮನವಿ ಮಾಡುತ್ತೇನೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

(ಹೆಚ್.ಡಿ.ಕುಮಾರಸ್ವಾಮಿ)

: ಪ್ರಕಟಣೆಗಾಗಿ :

ನಾವು ನೆರಳುಗಳಿಲ್ಲದ ಮನುಷ್ಯರಾಗಬಾರದು.

ಆದರೆ ನಮ್ಮ ನೆರಳೇ ನಮ್ಮನ್ನು ನುಂಗುವಂತೆಯೂ ಆಗಬಾರದು.

ಸ್ವಾತಂತ್ರ್ಯ ದಿನಾಚರಣೆಯ ಶುಭ ಸಂಧರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಾಡಿದ ಭಾಷಣವನ್ನು ಆಸಕ್ತಿಯಿಂದ ಕೇಳಿದವರಲ್ಲಿ ನಾನೂ ಒಬ್ಬ. ಕನ್ನಡ ನಾಡನ್ನು ಸಶಕ್ತ ರಾಜ್ಯವಾಗಿಸುವ ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ಕೈಗೊಂಡು ಮುನ್ನೆಡೆಯುತ್ತಿರುವ ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾದದ್ದು, ಕನ್ನಡ ಸಂಸ್ಕೃತಿಯ ಆರಾಧಕನಾಗಿ ನನ್ನ ಕರ್ತವ್ಯ. ಅವರಿಗೆ ಅಭಿನಂದನೆಗಳು.

ಭಾಷಣದ ಕೊನೆಯ ಘಟ್ಟದಲ್ಲಿ ಅವರು ನೇಮಕಾತಿಗಳ ವಿಚಾರ ಮಾತನಾಡುತ್ತಾ, "ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಭಾವುಕತೆಯ ಬಡಿದೆಬ್ಬಿಸಲು ಯತ್ನಿಸುತ್ತಿವೆ. ಇದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ನಡವಳಿಕೆ ಎಂಬುದನ್ನು ಜನತೆ ಗಮನಿಸಬೇಕು. ಅಕ್ರಮಗಳಿಗೆ ಮಾನವೀಯ ಮುಖ ತೊಡಿಸಲು ಮುಂದಾಗುವವರನ್ನು ಹಿಮ್ಮೆಟ್ಟಿಸಬೇಕು" ಎಂದು ಹೇಳಿದರು. ಇದು ತೀವ್ರವಾಗಿ ನನ್ನ ಮನ ಕಲಕಿತು. "ಅಕ್ರಮಗಳಿಗೆ ಮಾನವೀಯ ಮುಖ ತೊಡಿಸಲು ಮುಂದಾಗುವವರು" ಎನ್ನುವ ಹೇಳಿಕೆ ಕೆಎಎಸ್ ಅಭ್ಯರ್ಥಿಗಳ ಆಯ್ಕೆ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವನ್ನು ವಿರೋಧಿಸುತ್ತಿರುವ ನನ್ನನ್ನೇ ನೇರವಾಗಿ ತಟ್ಟಿದಂತೆನಿಸಿತು. ಆದುದರಿಂದಾಗಿ ನನ್ನೀ ಕೆಲ ಅನಿಸಿಕೆಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಬಯಸಿ, ಈ ಕೆಲ ಮಾತುಗಳು ಗುಣಗ್ರಾಹಿಗಳಾದವರು ಸತ್ಯ ಗ್ರಹಿಸುವರೆಂಬ ನಂಬುಗೆ ನನ್ನದು.

ಅನಿರೀಕ್ಷಿತವಾಗಿ ರಾಜಕಾರಣಕ್ಕೆ ಬಂದವನು ನಾನು. ಮೊದಲ ಬಾರಿ ಶಾಸಕನಾಗಿ ಆಯ್ಕೆಯಾದಾಗಲೇ ಈ ನಾಡಿನ ಆಡಳಿತ ಚುಕ್ಕಾಣಿ ಹಿಡಿಯುವ ಸೌಭಾಗ್ಯ ಒದಗಿ ಬಂದದ್ದು ಕೂಡ ಅನಿರೀಕ್ಷಿತವೇ ಆದರೂ ಅದು ನನ್ನ ಬಾಳಿನ ಅತ್ಯಮೂಲ್ಯ ದಿನಗಳು. ಇಂದಿನ ಮುಖ್ಯಮಂತ್ರಿಗಳ ಅಂದಿನ ರಾಜಕೀಯ ನಿಲುವುಗಳು ಕೂಡ ನನ್ನ ಬದುಕಿನ ಅನಿರೀಕ್ಷಿತ ತಿರುವುಗಳಿಗೂ ಕಾರಣವಾಗಿದ್ದವು. ಆ ಮಾತು ಬೇರೆ.

20 ತಿಂಗಳ ನನ್ನ ಆಡಳಿತಾವಧಿಯಲ್ಲಿ ಸಾಧ್ಯವಾದಷ್ಟೂ ಜನರ ಬಳಿಗೆ ತೆರಳಿ ಅವರ ನೋವು, ದುಃಖ, ಅಸಹಾಯಕತೆ, ತಪ್ತ ಬದುಕನ್ನು ಅರ್ಥಮಾಡಿಕೊಳ್ಳಬೇಕು, ಸ್ವತಃ ಅನುಭವ ಗಳಿಸಿಕೊಳ್ಳಬೇಕು ಎನ್ನುವುದು ನನ್ನ ಅಪೇಕ್ಷೆಯಾಗಿತ್ತು. ನನ್ನ ಸಂಪುಟದ ಸಹೋದ್ಯೋಗಿಗಳು ಹಾಗೂ ಅಧಿಕಾರ ಶಾಹಿಗೆ ಅವರ ಜವಾಬ್ದಾರಿಗಳನ್ನು ತಿಳಿಸಿ, ಅದರ ನಿರ್ವಹಣೆಗೆ ಮುಕ್ತ ಸ್ವಾತಂತ್ರ್ಯ ನೀಡಬೇಕು. ನಿರ್ಣಾಯಕ ಹಂತಗಳಲ್ಲಿ ಮಾತ್ರ ನನ್ನ

ಪಾತ್ರವಿರಬೇಕು ಎನ್ನುವ ನಿಲುವೂ ನನ್ನದಾಗಿತ್ತು. ಇಡೀ ರಾಜ್ಯವನ್ನು ಸುತ್ತುವಾಗ ನನ್ನ ಕಣ್ಣು ಕಂಡದ್ದು, ಯಾವುದೇ ಭರವಸೆಯ ಬೆಳಕೂ ಇಲ್ಲದ ಅಸಹನೀಯ ಬದುಕು ದೂಡುತಿದ್ದ ಅಸಹಾಯಕರು, ದಲಿತರು, ಅಂಗವಿಕಲರು, ಮಹಿಳೆಯರು, ಬಡತನ ಮೈವೆತ್ತ ದಲಿತರುಗಳ ಮಹಾ ಪ್ರವಾಹವೇ.

ಈ ದನಿಯೇ ಇಲ್ಲದ ಜನವರ್ಗಕ್ಕೆ ದನಿಯಾಗಬೇಕು, ಅವರ ಕಷ್ಟಗಳನ್ನು ಕಿಂಚಿತ್ತಾದರೂ ಕಡಿಮೆ ಮಾಡುವ ಕೈ ನನ್ನದಾಗಬೇಕು ಎನ್ನುವ ಮಾನಸಿಕ ನಿರ್ಣಯ ಕೈಗೊಂಡಿದ್ದೇ ಸಾರಾಯಿ ಮಾರಾಟ ನಿಷೇಧ, ಲಾಟರಿ ನಿಷೇಧ, ಅಂಗವಿಕಲರಿಗೆ ಮಾಸಾಶನ ಹೆಚ್ಚಳ, ವಿಧವೆಯರಿಗೆ ಮಾಸಾಶನ, ಕೃಷಿ ಸಾಲ ಮನ್ನಾ, ಅತಿ ಹೆಚ್ಚು ಸಂಖ್ಯೆಯ ವಿದ್ಯಾಸಂಸ್ಥೆಗಳ ಸ್ಥಾಪನೆ ಈ ಎಲ್ಲವೂ ನನ್ನ ಚಿಂತನೆಯ ಫಲಿತಗಳಾಗಿದ್ದವು. ನನ್ನ ಜನರ ಕಣ್ಣೀರ ತೊಡೆಯುವಲ್ಲಿ ಒಂದಿಷ್ಟು ಯಶಕಂಡೆವು. ಈ ಭಾಗ್ಯ ದೊರಕಿಸಿಕೊಟ್ಟ ಎಲ್ಲರಿಗೂ ನಾನು ಚಿರಋಣಿ. ನನ್ನ ಸಚಿವ ಸಹೋದ್ಯೋಗಿಗಳು, ಅಧಿಕಾರಿ ಮಿತ್ರರು ನನಗೆ ನೀಡಿದ ಸಹಕಾರ, ನನ್ನ ನಂಬಿಕೆಯನ್ನು ಅವರು ನಿಜಮಾಡಿದ ರೀತಿ ಅಪೂರ್ವ ಎನಿಸುವಂತಹವು. ನಿಜವಾಗಿ ನಾನು ಭಾಗ್ಯಶಾಲಿ ಎಂದು ಭಾವಿಸುವೆ.

ಇದೇ ಮಾನವೀಯ ಭಾವವೇ; ಲೋಕಸೇವಾ ಆಯೋಗದ ಅಭ್ಯರ್ಥಿಗಳ ಆಯ್ಕೆಯ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳನ್ನು ಪ್ರತಿಭಟಿಸುವವರಿಗೆ ನಾನು ನೀಡಿದ ಬೆಂಬಲದ ಕಾರಣ. ಇಲ್ಲಿ ರಾಜಕೀಯದ ದುರಾಸೆಯಿಲ್ಲ. ಪ್ರತಿಭಟನೆಗಾಗಿ ಪ್ರತಿಭಟನೆ ಎನ್ನುವ ಮಂತ್ರವೂ ಇಲ್ಲ. ಮತ್ತಾವ Attributable reasons ಕೂಡ ಇಲ್ಲ. ನಾನು ಭ್ರಷ್ಟಾಚಾರದ ಪರವಾಗಿಯೂ ಇಲ್ಲ. ಕೆ.ಪಿ.ಎಸ್.ಸಿ.ಯ ಪ್ರಚಾರಕನೂ ಅಲ್ಲ.

ಅಭ್ಯರ್ಥಿಗಳೊಡನೆ ನನ್ನ ಒಡನಾಟ, ನನ್ನ ಒಳಗಣ್ಣುಗಳನ್ನು ತೆರೆಸಿದೆ. ಅಂಥ ಅಭ್ಯರ್ಥಿಯೊಬ್ಬರು ತಹಶೀಲ್ದಾರ್ ಹುದ್ದೆಗೆ ಸಾಧನೆಯ ಬಲದಿಂದ ಆಯ್ಕೆಯಾಗಿರುವ, ತೀರ ಕಡುಬಡತನ ದಾರಿದ್ರ್ಯಗಳ ಹಿನ್ನೆಲೆಯ ಬುಡಕಟ್ಟು ಜನಾಂಗದ ವ್ಯಕ್ತಿ ಅಸಿಸ್ಟೆಂಟ್ ಕಮೀಷನರ್ ಆಗಿ ಆಯ್ಕೆಯಾಗಿ ಅದ್ಭುತ ಮೆರೆದಿರುವ ಈ ಸ್ಥಿತಿ ನನ್ನನ್ನು ಮೂಕನನ್ನಾಗಿಸಿದೆ. ಅವರ ಸಾಧನೆಯ ಹಿಂದೆ ಅದೆಷ್ಟು ಪರಿಶ್ರಮ! ಯತ್ನದ ಫಲ ಇನ್ನೇನು ಕೈಗೆಟುಕಿತ್ತೆನ್ನುವಾಗ ಜಾರಿದ ಯಶ ತಂದುಕೊಡುವ ದುಃಖ ಅಸಹನೀಯ, ಆತ್ಮಘಾತಕ.

ಮತ್ತೊಂದು Chance ನ ಅವಕಾಶವೇ ಕಾಣೆಯಾಗಿ ಅವರ ಇಡೀ ಬದುಕನ್ನು ತನ್ನ ಒಳಸುಳಿಗೆಳೆದುಕೊಂಡ ಕಪ್ಪು ಕೂಪಗಳು ನನ್ನನ್ನು ವಿಹ್ವಲನಾಗಿಸಿವೆ. ಯಾರದೊ ತಪ್ಪಿಗೆ ತಲೆದಂಡ ಕೊಡುವಂತೆ ಮಾಡಿದ ಈ ಕ್ರೂರ ವ್ಯವಸ್ಥೆ ನನ್ನನ್ನು ಬೆಚ್ಚಿ ಬೀಳಿಸಿದೆ.

ನೆಲದ ಜನರ, ನಾಡವರ ರಕ್ಷಣೆಗೆಂದು ಬದ್ಧವಾಗಿರಬೇಕಾದ ಸರ್ಕಾರ, ಇದೇ ಉದ್ದೇಶಕ್ಕಾಗಿ ರೂಪಿತವಾದ ಕಾನೂನಿನ ವಿರುದ್ಧ ಸಾಗಿರುವ ದಾರಿ ನನ್ನನ್ನು ಕಾಡುತ್ತಿದೆ.

ಸಂವಿಧಾನದ 310 ರಿಂದ 323ನೇ ಪರಿಚ್ಛೇದದ ರಕ್ಷೆಯೊಳಗೆ ರಚಿತವಾದ ಸಾಂವಿಧಾನಿಕ ಸಂಸ್ಥೆಯೊಂದರ ವಿರುದ್ಧ ಸರ್ಕಾರ ತನ್ನ ಹಿಡಿತದ ಸಾಂಸ್ಥಿಕ ವ್ಯವಸ್ಥೆಯಿಂದ ತನಿಖೆ ಮಾಡಿಸಲು ಅವಕಾಶವಿಲ್ಲ ಎನ್ನುವ ಸತ್ಯವನ್ನು ಮರೆತ ನಮ್ಮ ಸರ್ಕಾರದ ರೀತಿ ನನ್ನನ್ನು ಕಳವಳಕ್ಕೀಡುಮಾಡಿದೆ.

ಸಂವಿಧಾನದ 323 ಪರಿಚ್ಛೇದದ ಪ್ರಕಾರ ಕೆ.ಪಿ.ಎಸ್.ಸಿ.ಯ ನಡವಳಿಕೆಗಳು, ಆದೇಶಗಳು, ಆಯ್ಕೆಗಳು, ವಾರ್ಷಿಕ ವರದಿಗಳನ್ನು ಸರ್ಕಾರ ಒಪ್ಪದೆ ಇದ್ದರೆ ಅದಕ್ಕೆ ಸಕಾರಣ ತಿಳಿಸಿ, ಸದನದ ಮುಂದೆ ಮಂಡಿಸಬೇಕು ಎನ್ನುವ ಅಂಶವನ್ನು ಸಿದ್ದರಾಮಯ್ಯ ಅವರ ಸರ್ಕಾರ ಮರತೇ ಹೋಗಿದೆ.

ಕೆ.ಪಿ.ಎಸ್.ಸಿ.ಯ ನೇಮಕಾತಿ ಪ್ರಕ್ರಿಯೆ 2 ಹಂತದಲ್ಲಿ ಜರುಗುತ್ತವೆ.

ಅ) ಸರ್ಕಾರದ ಕೋರಿಕೆಯ ಮೇರೆಗೆ ಸಂಬಂಧಿಸಿದ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿ, ಸಂದರ್ಶನಕ್ಕೆ 1:3ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವವರೆಗೆ ಐಎಎಸ್ ದರ್ಜೆಯ ಕಾರ್ಯದರ್ಶಿಯ ಜವಾಬ್ದಾರಿಯಾದರೆ

ಆ) ಸಂದರ್ಶನದ ಮೂಲಕ ಆಯ್ಕೆ ಆಯೋಗದ್ದು.

ಸಿ.ಐ.ಡಿ. ಯವರು ನಡೆಸಿರುವ ತನಿಖೆಯಲ್ಲಿ ಕಾರ್ಯದರ್ಶಿಯವರ ಕುರಿತು ತನಿಖೆ ನಡೆಸಿರುವುದಿಲ್ಲ. ಎರಡನೆ ಹಂತದಲ್ಲಿ ಮಾಡಿರುವ ಭ್ರಷ್ಟಾಚಾರದ ಆರೋಪಗಳಿಗೆ ಸೂಕ್ತವಾದ ಸಾಕ್ಷ್ಯಾಧಾರಗಳೇ ಇಲ್ಲ.

ನೇಮಕಗಳಲ್ಲಿ ಪಾವಿತ್ರ್ಯ ಕಾಯ್ದುಕೊಳ್ಳಬೇಕು ನಿಜ, ಆದರದನ್ನು ಕಾನೂನಿನ ಕತ್ತು ಕಿವುಚಿ ಸಾಧಿಸಲಾಗದು. ಅದು ಸಾಧು ಕೂಡ ಅಲ್ಲ.

ನಾನೆಂದೂ ಭಾವುಕತೆಯನ್ನು ಬಡಿದೆಬ್ಬಿಸುವ ಯತ್ನ ಮಾಡಿಲ್ಲ. ಅಕ್ರಮಗಳಿಗೆ ಮಾನವೀಯತೆಯ ಮುಖವನ್ನೂ ತೊಡಿಸಿಲ್ಲ. ಅಕ್ರಮಗಳ ಮೂಲಕ ಮಾನವೀಯತೆಯನ್ನು ಕೊಂದವರ ಕುರಿತಷ್ಟೆ ನನ್ನ ಆಕ್ರೋಶ.

ನನಗೆ ಮುಖ್ಯವಾಗುವುದು ಜೀವನವಿಡೀ ಸಾಧನೆಯ ಹಾದಿಯಲ್ಲಿ ಸಾಗಿ, ಸಹಸ್ರ ಕೋಟಲೆಗಳನ್ನೆದುರಿಸಿ ಬೆಳಕು ಕಂಡಿತೆನ್ನುವಾಗ ಕಾರಿರುಳ ಕೂಪಕ್ಕೆ ತಳ್ಳಲ್ಪಟ್ಟ ನೊಂದ ಬದುಕಷ್ಟೆ. ಅಸಹಾಯಕತೆಯ, ಕುಸಿವ ಮಳಲಲ್ಲಿ ಹೂತು ಕೊನೆಯುಸಿರೆಳೆಯುವ ಅವರ ಆರ್ದ್ರ ಕೂಗಷ್ಟೆ. ಯಾರದೋ ಬದುಕನ್ನು ಛಿದ್ರಮಾಡಿ ಪಾವಿತ್ರ್ಯ ಕಾಯ್ದುಕೊಳ್ಳುವ ಅನಿವಾರ್ಯತೆ ನನ್ನದಲ್ಲ. ಅದು ನನ್ನದಾಗದೇ ಇರಲಿ ಎನ್ನುವುದೇ ನನ್ನ ಸವಿನಯ ಪ್ರಾರ್ಥನೆ.

ನಾವು ನೆರಳುಗಳಿಲ್ಲದ ಮನುಷ್ಯರಾಗಬಾರದು. ಆದರೆ ನಮ್ಮ ನೆರಳೇ ನಮ್ಮನ್ನು ನುಂಗುವಂತೆಯೂ ಆಗಬಾರದು. ನಾನು ಯಾವಾಗಲೂ ಸಿದ್ದರಾಮಯ್ಯ ಅವರ ಕುರಿತು ಯೋಚಿಸುತ್ತೇನೆ. ಎಂಥಹ ಗಟ್ಟಿನಿಲುವಿನ ಮನುಷ್ಯ. ಕಾಳಜಿಯಿರುವ ಮನುಷ್ಯ. ಆದರೂ ನಾನು ಅಂದುಕೊಳ್ಳುತ್ತೇನೆ. May be if he had waited........Just waited a little longer........."

ಆತುರದ ನಿರ್ಧಾರ ಮಾಡಿ ನೂರಾರು ಜನರ ಬಾಳುಗೆಡವುದಕ್ಕಿಂತ ಕೊಂಚ ಯೋಚಿಸಿ ಅದೇ ನೂರಾರು ಜನರ ಬಾಳು ಕಟ್ಟಿದ್ದರೇ.............'ರೆ'........ಎಲ್ಲವೂ ರೆ ಜಗತ್ತೆ"

ಕೊನೆಯ ಮಾತು:

'ರೆ' ಜಗತ್ತೇ ಇಂದಿನ ವಾಸ್ತವವೇ? ನಾಳಿನ ನ್ಯಾಯಾಲಯದ ಹೋರಾಟ ಯಾರಿಗಾದರೂ ಜಯತಂದು ಕೊಡಲಿ. ಮಾನವೀಯತೆಯ ಪಾಠ ನಮ್ಮದಾದರೆ ಕೃತಾರ್ಥರು ನಾವು. ಇಲ್ಲಿ ಯಾರೂ ಮೇಲಲ್ಲ. ಸೋಲುವುದೂ ಯಾರೂ ಅಲ್ಲ. ನ್ಯಾಯ ಮತ್ತು ಮೌಲ್ಯಗಳಷ್ಟೆ. ನೆಮ್ಮದಿ ನಮ್ಮದಾಗಲಿ. ನಾನಂತೂ ನೊಂದವರ ಪರವೇ. ಅವರ ಕಾನೂನಿನ ಹೋರಾಟಕ್ಕೆ ಸದಾ ನನ್ನ ನೆರವೇ.

(ಹೆಚ್.ಡಿ.ಕುಮಾರಸ್ವಾಮಿ)